
# ಇಲ್ಲದ್ದು



ಕಲೆ: ವಾಗೀಶ ಹೆಗಡೆ

ಒಂದು ಸುಂದರ ಮದುವೆ
ಚೆಂದದ ಮದುಮಗ ಮದುಮಗಳು
ನಗು ನಾಚಿಕೆ ಬಂಧು ಬಳಗ
ಊಟ ತಾಂಬೂಲ ತುಟಿ ಕೆಂಪು
ಉಲ್ಲಾಸ ಸೂಸುವ ಕಂಪು
ಹವೆಯಲ್ಲಿ ತೇಲುವ ತಂಪು.

ಸೀರೆ ಬಣ್ಣ ಒಡವೆ ಹೆರಳು ಕೊರಳಿನ
ಮಾತುಗಳ ಹರಡುತ್ತ, ಪದರುಪದರಾಗಿ ಕೂತ
ರಂಗಿನಲ್ಲಿ ಕರಗುವ ಬಸವಳಿದ ಮುಖಗಳು.

'ಯಾಕಿಷ್ಟು ಸರಳ ನೀನು?
ಸೀರೆ, ಕರಿಮಣಿಯೂ ಸಾದಾ...
ಜರಿಸೀರೆ ಉಟ್ಟು ಕೊರಳು ಕೈಗಳಾದರೂ
ಝಣ ಝಣಿಸಬೇಡವೆ?'
ನನಗೆ ಪ್ರಶ್ನೆಗಳ ತೂರಿದರು ಅವರು.

'ಈ ಸೀರೆ ನಿಮ್ಮದೆ?' ಎಂದೆ.
'ಹೌದು' ಎಂಬ ಮುಖಭಾವ.
'ಈ ಹೊಸ ನತ್ತು, ಝುಮಕಿ, ಹರಳ ಬಳೆಗಳು?'
'ಅವೂ ನನ್ನವೇ' ಎಂದ ಅವರ
ಮಾತಿನಲ್ಲಿ ಹೆಮ್ಮೆ, ಭಂಗಿಯಲ್ಲಿ ಗತ್ತು...
'ಮತ್ತೆ ಈ ಉದ್ದ ಸರ? ಕೊರಳನಪ್ಪಿದ ದಪ್ಪ ಪಟ್ಟಿ?
ಸೊಂಟ ಸುತ್ತಿದ ಡಾಬು, ತೋಳಬಂದಿ, ಬೆರಳುಂಗುರ?'
'ಎಲ್ಲವೂ ನನ್ನವೇ' ಎಂದು ಬೀಗಿದರು.
'ಎರವಲು ಪಡೆದದ್ದು ಏನಾದರೂ ಉಂಟೆ?'
ನನ್ನ ಮಾತಿಗೆ ತಬ್ಬಿಬ್ಬಾದರು–
'ಛೇ... ಎಲ್ಲಾದರೂ ಉಂಟೇ...'
ಎನ್ನುತ್ತ ಮುಖ ನೋಡಿದರು.

'ನಾನೂ ನನ್ನದಷ್ಟೇ
ತೊಟ್ಟು ಬಂದಿರುವೆ...'
ಎಂದು ನಕ್ಕೆ.
ಅವರು ನಗಲಿಲ್ಲ.

● ಮಮತಾ ಶಂಕರ್

